# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 422 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 12/12/2018 |
| 4) | ಉತ್ತರಿಸುವವರು | ಮಾನ್ಯ ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಐ.ಟಿ.ಐ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಷ್ಟು ವರ್ಷಗಳಿಂದ ಖಾಲಿ ಇವೆ; ಅವುಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು; | ಹೌದು.<br>ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಖಾಲಿ ಇರುವ ಪಾಚಾರ್ಯರು, ಕಿರಿಯ ತರಬೇತಿ ಅಧಿಕಾರಿ, ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಲ್ಲಿ ನೇರ ನೇಮಕಾತಿಯಿಂದ ಭರ್ತಿ ಮಾಡುವ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಿದ್ದು, ಆಯೋಗವು ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆ ನೇಮಕಾತಿಗಾಗಿ ಈಗಾಗಲೇ ಅಧಿಸೂಚನೆ ಹೊರಡಿಸಿದೆ. ಉಳಿದಂತೆ ಬಡ್ತಿಯಿಂದ ತುಂಬುವ ಹುದ್ದೆಗಳಿಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲದಲ್ಲಿ ಬಾಕಿ ಇರುವ ಸಿವಿಲ್ ಅಪೀಲ್ ಸಂಖ್ಯೆ :2368/11 – (ಶ್ರೀ ಬಿ.ಕೆ.ಪವಿತ್ರ ಪ್ರಕರಣ) ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಮುಂದಿನ ಆದೇಶದವರೆಗೆ ಯಾವುದೆ ಮುಂಬಡ್ತಿ/ಹಿಂಬಡ್ತಿ ಪ್ರಕ್ರಿಯೆ ಜರುಗಿಸದೆ ಯಥಾಸ್ಥಿತಿ ಕಾಪಾಡುವಂತೆ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಯಾವುದೇ ಮುಂಬಡ್ತಿಯನ್ನು ನೀಡಿರುವುದಿಲ್ಲ. |
| ಆ) | ಜೆ.ಟಿ.ಓ.ದಿಂದ ಟಿ.ಓ ಬಡ್ತಿ ನೀಡುವಲ್ಲಿ ಎಷ್ಟು ವರ್ಷಗಳಿಂದ ವಿಳಂಬವಾಗಿದೆ; ವಿಳಂಬಕ್ಕೆ ಕಾರಣಗಳೇನು; ಯಾವಾಗ ಬಡ್ತಿ ನೀಡಲಾಗುವುದು; | |
| ಇ) | ಜೆ.ಟಿ.ಓ ಅಧಿಕಾರಿಗಳಿಂದ ಟಿ.ಓ. ಅಧಿಕಾರಿಗಳೆಂದು ಬಡ್ತಿಯನ್ನು ಯಾವಾಗ ಎಷ್ಟು ನೀಡಲಾಗಿದೆ? (ಸಂಪೂರ್ಣ ವಿವರ ನೀಡುವುದು) | ಕಿರಿಯ ತರಬೇತಿ ಅಧಿಕಾರಿ ಹುದ್ದೆಯಿಂದ ತರಬೇತಿ ಅಧಿಕಾರಿ ಹುದ್ದೆಗೆ ಮುಂಬಡ್ತಿ ನೀಡಿರುವ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

**ಸಂಖ್ಯೆ: ಕೌಉಜೀಇ 74 ಕೈತಪ್ರ 2018**

(ಆರ್.ವಿ. ದೇಶಪಾಂಡೆ)
**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು**

# ಅನುಬಂಧ

ಕಿರಿಯ ತರಬೇತಿ ಅಧಿಕಾರಿ ಹುದ್ದೆಯಿಂದ ತರಬೇತಿ ಅಧಿಕಾರಿ ಹುದ್ದೆಗೆ ಮುಂಬಡ್ತಿ ನೀಡಿರುವ ವಿವರಗಳು:-

| ಕ್ರಮ ಸಂಖ್ಯೆ | ದಿನಾಂಕ | ನೌಕರರ ಸಂಖ್ಯೆ |
|---|---|---|
| 1. | ದಿನಾಂಕ: 02-01-2003 | 24 |
| 2. | ದಿನಾಂಕ: 11-04-2003 | 20 |
| 3. | ದಿನಾಂಕ: 15-07-2004 | 02 |
| 4. | ದಿನಾಂಕ: 24-02-2007 | 01 |
| 5. | ದಿನಾಂಕ: 23-09-2006 | 103 |
| 6. | ದಿನಾಂಕ: 26-10-2007 | 53 |
| 7. | ದಿನಾಂಕ: 10-01-2008 (ಕರ್ನಾಟಕ ಆಡಳಿತ ನ್ಯಾಯ ಮಂಡಳಿ ದಿ:24-03-2005 ರ ಆದೇಶದಂತೆ ಅರ್ಹ ಕಿರಿಯ ತರಬೇತ ಅಧಿಕಾರಿಗಳ ಹುದ್ದೆಗಳಿಂದ ತರಬೇತಿ ಅಧಿಕಾರಿ ಹುದ್ದೆಗೆ ನೀಡಿದ್ದ ಮುಂಬಡ್ತಿ ಆದೇಶಗಳನ್ನು ಪರಿಷ್ಕರಿಸಿದ ಆದೇಶ ಸಂ:ಉತಇ/ತರಬೇತಿ/ ಆಡಳಿತ-6/ವಿವ-14/2010-11 ದಿ:08-07-2011 ರಂದು ತಿದ್ದುಪಡಿ ಆದೇಶವನ್ನು ನೀಡಲಾಗಿದೆ.) | 44 |
| 8. | ದಿನಾಂಕ: 15-05-2012 | 46 |
| 9. | ದಿನಾಂಕ: 01-06-2016 | 02 |
| | ಒಟ್ಟು | 295 |